# ಸರ್ಕಾರಿ ಪ್ರೌಢಶಾಲೆ,ಅರಸೀಕೆರೆ ಪಾವಗಡ ತಾ ಮಧುಗಿರಿ

## ಶೈ.ಜಿ ಪಿನ್ ಕೋಡ್-572116

# ಶಾಲಾ ದರ್ಪಣದ ಯಶೋಗಾಥೆ




ಮುಖ್ಯಶಿಕ್ಷಕರ ಹೆಸರು : ಶ್ರೀ ರಾಮಚಂದ್ರಪ್ಪ.ಕೆ

ಮೊಬೈಲ್ ಸಂಖ್ಯೆ : 9980430764

ಇ-ಮೇಲ್ ವಿಳಾಸ : ghsarasikere189@gmail.com

## 2.ಶಾಲೆಯ ಪೂರ್ಣ ಭಾವಚಿತ್ರ :





## 3. ಶಾಲೆಯ ಪ್ರಾರಂಭದಿಂದ ಇಲ್ಲಿಯವರೆಗೂ : 2003-04 ದಿನಾಂಕ – 21 / 08 / 2003

ಶಾಲೆಯು ಇಂದಿಗೆ ಪ್ರಾರಂಭವಾಗಿ ಸುಮಾರು 22 ವರ್ಷಗಳಾಗಿದ್ದು ಅದರ ಹಿನ್ನೆಲೆಯನ್ನು ಗಮನಿಸಿದಾಗ ……………..

1. ಮೊದಲಿಗೆ 8 ನೇ ತರಗತಿಯು ಪ್ರಾರಂಭದಲ್ಲಿ ಪೋಲಿಸ್ ಠಾಣೆಯ ಎದುರು ಇರುವ ಶ್ರೀ ಚೆನ್ನಮಲ್ಲಿಕಾರ್ಜುನ ದೇವಸ್ಥಾನದ ಕೊಠಡಿಗಳಲ್ಲಿ ಪ್ರಾರಂಭವಾಯಿತು.

2. ನಂತರ 8 ಮತ್ತು 9 ನೇ ತರಗತಿಗಳು ಪ್ರಾಥಮಿಕ ಶಾಲೆಯ ಕೊಠಡಿಗಳಲ್ಲಿ ನಡೆಸಲಾಯಿತು.

3. ನಂತರ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ 5 ಕೊಠಡಿಗಳು ಮಂಜೂರಾದವು ಅದರಲ್ಲಿ ಎರಡು ಕೊಠಡಿಗಳು ಮಾತ್ರ ನಿರ್ಮಿಸಲ್ಪಟ್ಟವು.

4.ನಂತರ ಡಾ.ನಂಜುಡಪ್ಪ ವರದಿಯ ಅನುಸಾರ 5 ಕೊಠಡಿಗಳು,ಅಕ್ಷರ ದಾಸೋಹ ಕೊಠಡಿ, ಶೌಚಾಲಯ ಕೊಠಡಿಗಳು ನಿರ್ಮಿಸಲ್ಪವು.

5. ನಂತರ ಐ.ಸಿ.ಟಿ ಫೇಸ್-2 ಅಡಿಯಲ್ಲಿ ಕಂಪ್ಯೂಟರ್ ತರಗತಿಗಳು ಪ್ರಾರಂಭವಾದವು.

6. ನಂತರ ಟೆಲಿ ಎಜುಕೇಷನ್ ತರಗತಿಗಳು ಪ್ರಾರಂಭವಾದವು.

7. ನಂತರ ಐ.ಎಲ್.ಪಿ ಸಂಸ್ಥೆಯ ವತಿಯಿಂದ ಸ್ಮಾರ್ಟ್ ತರಗತಿಯು ಕೂಡಾ ಪ್ರಾರಂಭವಾಯಿತು.

8. ನಂತರ ಗಡಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕ್ರೀಡಾ ಕೊಠಡಿ ನಿರ್ಮಿಸಲಾಯಿತು.

9. ನಂತರ ಆರ್.ಎಂ.ಎಸ್.ಎ.ಯೋಜನೆಯಡಿಯಲ್ಲಿ 6 ಕೊಠಡಿಗಳು ಮಂಜೂರಾಗಿ ನಿರ್ಮಿಸಲ್ಪಟ್ಟವು

10. ನಂತರ ವಿಶೇಷ ಅಭಿವೃದ್ಧಿ ಯೋಜನೆ**(SDP)** ಯ ಅಡಿಯಲ್ಲಿ ಬರುವ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸಲ್ಪಡುವ ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರವು 2017-18 ನೇ ಸಾಲಿನಿಂದ ಪ್ರಾರಂಭವಾಯಿತು.


ಈಗ ಪ್ರಸ್ತುತ ಸುಮಾರು 16 ಕೊಠಡಿಗಳನ್ನು ಹೊಂದಿದ್ದು ಅದರಲ್ಲಿ ತರಗತಿ ಕೊಠಡಿಗಳು,ವಿಭಾಗವಾರು ವಿಜ್ಞಾನ ಕೊಠಡಿಗಳಾದ ಜೀವಶಾಸ್ತ್ರ, ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರ ಕೊಠಡಿಗಳು, ಸ್ಮಾರ್ಟ್ ತರಗತಿ ಕೊಠಡಿ, ಗ್ರಂಥಾಲಯ ಕೊಠಡಿ, ಕಂಪ್ಯೂಟರ್ ಕೊಠಡಿ,ಹೊಲಿಗೆ ಕೊಠಡಿ,ಕ್ರೀಡಾ ಕೊಠಡಿ, ಅಕ್ಷರ ದಾಸೋಹ ಕೊಠಡಿಗಳನ್ನು ಹೊಂದಿದೆ. ಅಲ್ಲದೇ ವಿಶೇಷವಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಕೆಸ್ಟೆಪ್ಸ್ ನಿಂದ ಸ್ಥಾಪಿತವಾಗಿರುವ 6 ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರಗಳಲ್ಲಿ ನಮ್ಮ ಅರಸೀಕೆರೆ ಪ್ರೌಢಶಾಲೆಯು ಸೇರಿದ್ದು ಇದರಲ್ಲಿ ಹೊರಾಂಗಣ ವಿಜ್ಞಾನ ಉದ್ಯಾನವನವು ಕೂಡಾ ಸೇರಿದೆ.

## ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರದ ಪರಿಚಯ : -

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯ ಪ್ರಾಯೋಜಕತ್ವದಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ನಡೆಸಲಾಗುತ್ತಿರುವ 6 ವಿಜ್ಞಾನ ಸಂಪನ್ಮೂಲ ಕೇಂದ್ರಗಳಲ್ಲಿ ನಮ್ಮ ವಿಜ್ಞಾನ ಸಂಪನ್ಮೂಲ ಕೇಂದ್ರವೂ ಒಂದು.ಈ ಕೇಂದ್ರವನ್ನು ವಿಶೇಷ ಅಭಿವೃದ್ಧಿ ಯೋಜನೆ(SDP) ಯ ಅಡಿಯಲ್ಲಿ ಬರುವ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿದೆ.ಈ ವಿಜ್ಞಾನ ಕೇಂದ್ರವು 2017-18ನೇ ಸಾಲಿನಿಂದ ಪೂರ್ಣಪ್ರಮಾಣದಲ್ಲಿ ಸಿದ್ಧಗೊಂಡಿದ್ದು, ಈ ಕೆಳಗಿನ ಸೌಲಭ್ಯಗಳನ್ನು ಹೊಂದಿರುತ್ತದೆ.

### 1. ಹೊರಾಂಗಣ ವಿಜ್ಞಾನ ಉದ್ಯಾನವನ:

ಇದು 28 ಹೊರಾಂಗಣ ವಿಜ್ಞಾನದ ಆಟಿಕೆಗಳನ್ನು ಹೊಂದಿದ್ದು, ಪ್ರತಿಯೊಂದು ಆಟಿಕೆಯು ವಿಜ್ಞಾನದ ತತ್ವವನ್ನು ಆಡುತ್ತಾ ಕಲಿಯುವ ಅವಕಾಶವನ್ನು ಕಲ್ಪಿಸುತ್ತದೆ. ಮಕ್ಕಳು ಈ ಆಟಿಕೆಗಳನ್ನು ಆಡುತ್ತಾ ಸಂತಸದಿಂದ ವಿಜ್ಞಾನದ ತತ್ವಗಳನ್ನು ಕಲಿಯಬಹುದು.





# ಹೊರಾಂಗಣ ವಿಜ್ಞಾನ ಉದ್ಯಾನವನ



## 2.ವಿಜ್ಞಾನ ಪ್ರಯೋಗಾಲಯ:

ಕೇಂದ್ರವು ಸುಸಜ್ಜಿತವಾದ ಭೌತಶಾಸ್ತ್ರ ,ರಸಾಯನಶಾಸ್ತ್ರ, ಜೀವಶಾಸ್ತ್ರ ಹಾಗೂ ಗಣಿತ ಪ್ರಯೋಗಾಲಯ ಗಳನ್ನುಹೊಂದಿದ್ದು, **TDC ,IISc** , ಕುದಾಪುರ ಸಂಸ್ಥೆಗಳಿಂದ ಪಡೆದ ಅತ್ಯಾಧುನಿಕ ಉಪಕರಣಗಳನ್ನು ಹೊಂದಿದ್ದು **6** ನೇ ತರಗತಿಯಿಂದ **10**ನೇ ತರಗತಿಯಿಂದ ವರೆಗಿನ ವಿಜ್ಞಾನ ಹಾಗೂ ಗಣಿತ ವಿಷಯಗಳ ಪ್ರಯೋಗಗಳನ್ನು ಮಾಡುವ ಸೌಲಭ್ಯವನ್ನು ಹೊಂದಿದೆ.






**2. ಸ್ಮಾರ್ಟ್ ತರಗತಿ ಕೊಠಡಿ : ಬೆಂಗಳೂರಿನ ಐ.ಎಲ್.ಪಿ (ಇಂಡಿಯಾ ಲಿಟ್ರೆಸಿ ಪ್ರಾಜೆಕ್ಟ್)ವತಿಯಿಂದ ವಿಜ್ಞಾನ,ಗಣಿತ,ಸಮಾಜ ವಿಜ್ಞಾನ ಮತ್ತು ಕನ್ನಡ ವಿಷಯಗಳ ಸಂಪನ್ಮೂಲ ವೀಡಿಯೋ ಸಹಿತ ಪಿ.ಪಿ.ಟಿ.ಗಳನ್ನು ಒದಗಿಸಿದ್ದು,ಜೊತೆಗೆ ಪ್ರಯೋಗಾಲಯದ ಕಿಟ್ ಗಳನ್ನು ಕೂಡಾ ಒದಗಿಸಿದೆ.**






## 4.ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ವಿಶ್ಲೇಷಣಾ ವರದಿ :

ಕಳೆದ **3** ವರ್ಷಗಳಿಂದ ಶಾಲೆಯ **SSLC** ಫಲಿತಾಂಶ ಉತ್ತಮಗೊಳ್ಳುತ್ತಿದೆ. ಶೇ.**100** ಫಲಿತಾಂಶ ಬಂದಿದ್ದು,




ದಾಖಲಾತಿ: ಪ್ರಸ್ತುತ ವರ್ಷದ  ದಾಖಲಾತಿ 124 ಆಗಿದೆ.

**NO.OF STUDENTS ENROLLED**




**YEARS**

## ** ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರಕ್ಕೆ ಭೇಟಿ ನೀಡಿದವರು :-

1. ಪಾವಗಡ ತಾಲೂಕಿನ ಸುತ್ತಮುತ್ತಲಿನ ಸುಮಾರು 41 ಪ್ರಾಥಮಿಕ ಶಾಲೆಗಳ ಮತ್ತು 19 ಪ್ರೌಢಶಾಲೆ ಮತ್ತು 2 ಪದವಿ ಪೂರ್ವ ಕಾಲೇಜ್‌ನ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರದ ವಿಭಾಗವಾರು ಜೀವಶಾಸ್ತ್ರ ,ರಸಾಯನ ಶಾಸ್ತ್ರ ,ಮತ್ತು ಭೌತಶಾಸ್ತ್ರದ ವಿವಿಧ ಮಾದರಿ ಗಳನ್ನು ಮತ್ತು ವಿವಿಧ ಪ್ರಯೋಗಗಳನ್ನು ವೀಕ್ಷಿಸಿದರು, ಅಲ್ಲದೇ ಹೊರಾಂಗಣ ವಿಜ್ಞಾನ ಉದ್ಯಾನ ವನದಲ್ಲಿನ ಸುಮಾರು 28 ವಿವಿಧ ಕಾರ್ಯನಿರತ ಮಾದರಿಗಳನ್ನು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತ್ಯಪಡಿಸಿದರು.

2. ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರ ಕಛೇರಿಯ ಅಧಿಕಾರಿಗಳು,ಡಯಟ್ ನ ಅಧಿಕಾರಿ ಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಅಧಿಕಾರಿಗಳು ಭೇಟಿ ನೀಡಿ ಮಿನಿವಿಜ್ಞಾನ ಸಂಪನ್ಮೂಲ ಕೇಂದ್ರದ ವಿಭಾಗವಾರು ಜೀವಶಾಸ್ತ್ರ,ರಸಾಯನಶಾಸ್ತ್ರ,ಮತ್ತು ಭೌತಶಾಸ್ತ್ರದ ವಿವಿಧ ಮಾದರಿಗಳನ್ನು ಮತ್ತು ವಿವಿಧ ಪ್ರಯೋಗಗಳನ್ನು ವೀಕ್ಷಿಸಿದರು,ಅಲ್ಲದೇ ಹೊರಾಂಗಣ ವಿಜ್ಞಾನ ಉದ್ಯಾನವನದಲ್ಲಿನ ಸುಮಾರು 28 ವಿವಿಧ ಕಾರ್ಯನಿರತ ಮಾದರಿ ಗಳನ್ನು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತ್ಯಪಡಿಸಿದರು.

3. ಹೊರಾಂಗಣ ವಿಜ್ಞಾನ ಉದ್ಯಾನವನಕ್ಕೆ ಶಾಲಾ ವಿದ್ಯಾರ್ಥಿಗಳು,ಇಲಾಖಾ ಅಧಿಕಾರಿಗಳು ಅಲ್ಲದೇ ಶಿಕ್ಷಣ ಪ್ರೇಮಿಗಳು,ವಿಜ್ಞಾನಾಸಕ್ತರು ಮತ್ತು ಸಾರ್ವಜನಿಕರಿಗೂ ಕೂಡಾ ಮುಕ್ತ ಅವಕಾಶವಿದೆ.

4. ಒಟ್ಟಿನಲ್ಲಿ ಸುಮಾರು 2000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು,ಸುಮಾರು 125 ಶಿಕ್ಷಕರು,ಸುಮಾರು 55 ವಿಜ್ಞಾನಾಸಕ್ತರು , 60 ಜನ ಸಾರ್ವಜನಿಕರು ಅಲ್ಲದೇ 25 ಇಲಾಖಾ ಅಧಿಕಾರಿಗಳು ಭೇಟಿ ನೀಡಿದ್ದಾರೆ.

**5. ಮಕ್ಕಳಲ್ಲಿ ಬುನಾದಿ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಕಲಿಕಾ ಭೋಧನಾ ಚಟುವಟಿಕೆಯಲ್ಲಿ ಹಮ್ಮಿಕೊಂಡ ನಾವಿನ್ಯಯುತ ಚಟುವಟಿಕೆಗಳು**









ಮಕ್ಕಳಿಗೆ ರಕ್ತದ ಗುಂಪಿನ ಪರೀಕ್ಷೆ



ಶಾಲೆಯ ವಿಜ್ಞಾನ ಶಿಕ್ಷಕರಾದ ರೇಣುಕರಾಜ್ ಜಿ.ಎಚ್. ರವರಿಂದ ರಕ್ತದ ಗುಂಪಿನ ಪರೀಕ್ಷೆಯ ಬಗ್ಗೆ ವಿವರಣೆ ನೀಡುತ್ತಿರುವುದು

## ಹಿರಿಯ ವಿದ್ಯಾರ್ಥಿಗಳ ಸಂಘದ ರಚನೆ ಮಾಡಲಾಯಿತು.





## ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರದಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳು :-




" ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಶಾಲಾ ಆವರಣದಲ್ಲಿ ಮುಖ್ಯ ಶಿಕ್ಷಕರು,ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳಿಂದ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ.



"ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಶಾಲಾ ಆವರಣದಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿಗಳಿಂದ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ.



"ಶ್ರೀಯುತ ಬಿ.ಕೆ.ಮುನಿಸ್ವಾಮಿ ರವರು ಔಷಧಿ ಸಸ್ಯಗಳ ಮಹತ್ವ ಮತ್ತು ಆದರ ಪ್ರಾಮುಖ್ಯತೆ ಬಗ್ಗೆ ಉಪನ್ಯಾಸ ಕಾರ್ಯಕ್ರಮ ನೆಡಸಿಕೊಡುತ್ತಿರುವುದು.



"ಶ್ರೀಯುತ ಬಿ.ಕೆ.ಮುನಿಸ್ವಾಮಿ ರವರು ಔಷಧಿ ಸಸ್ಯಗಳ ಮಹತ್ವ ಮತ್ತು ಪ್ರಾಮುಖ್ಯತೆ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸುತ್ತಿರುವುದು.



"ಸ್ವಚ್ಛ ಭಾರತ ಅಭಿಯಾನ"ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲು ಶಾಲಾ ಆವರಣದಲ್ಲಿ ಕಸ ಗುಡಿಸುವ ಮೂಲಕ ಅರಿವು ಮೂಡಿಸಲಾಯಿತು.



"ಸ್ವಚ್ಛ ಭಾರತ ಅಭಿಯಾನ"ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲು ಶಾಲಾ ಆವರಣದಲ್ಲಿ ಕಸ ಗುಡಿಸುವ ಮೂಲಕ ಅರಿವು ಮೂಡಿಸಲಾಯಿತು.






ಕ್ಷೇತ್ರ ಭೇಟಿ ಕಾರ್ಯಕ್ರಮದಡಿಯಲ್ಲಿ "ವಿಶ್ವದ ಎಂಟನೇ ಅದ್ಭುತವಾದ ಪಾವಗಡ ತಾಲ್ಲೂಕಿನ ಪಳವಳ್ಳಿ ಗ್ರಾಮದ ಸೋಲಾರ್ ಪಾರ್ಕ್ ಗೆ ಭೇಟಿ ನೀಡಿದಾಗ ಶ್ರೀಯುತ ಪರಮೇಶ್‌ರವರು ಮಾಹಿತಿ ನೀಡಿದರ



ಐ.ಎಲ್.ಪಿ ಸಂಸ್ಥೆವತಿಯಿಂದ ಎಸ್.ಎಸ್.ಎಲ್.ಸಿ.ವಿದ್ಯಾರ್ಥಿಗಳಿಗೆ "ಶೈಕ್ಷಣಿಕ ವೃತ್ತಿ ಮಾರ್ಗದರ್ಶನ" ಕಾರ್ಯಕ್ರಮವನ್ನು ಮಂಜುನಾಥ ನಾಯಕ ರವರು ನಡೆಸುತ್ತಿರುವುದು.




"ರಾಷ್ಟ್ರೀಯ ವಿಜ್ಞಾನ ದಿನಾಚರಣೆ "ಪ್ರಯುಕ್ತ ಭಾಷಣ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡಿರುವುದು.




“ಆಕಾಶಕಾಯಗಳ ವೀಕ್ಷಣೆ ಮತ್ತು ದೂರದ ವಸ್ತುಗಳನ್ನು ದೂರದರ್ಶಕದ ಸಹಾಯದಿಂದ ವೀಕ್ಷಣೆ ಮಾಡುತ್ತಿರುವುದು




“ಆಕಾಶಕಾಯಗಳ ವೀಕ್ಷಣೆ ಮತ್ತು ಹುಣ್ಣಿಮೆ ಚಂದ್ರನ ವೀಕ್ಷಣೆಯನ್ನು ದೂರದರ್ಶಕದ ಸಹಾಯದಿಂದ ವೀಕ್ಷಣೆ ಮಾಡುತ್ತಿರುವುದು

## 5. ಶಾಲೆಯ ಭೌತಿಕ ಪರಿಸರ ಶಾಲಾ ಮೈದಾನ ,ಕುಡಿಯುವ ನೀರು,ಶೌಚಾಲಯ ಇತರ ಸೌಲಭ್ಯಗಳ ಸಮರ್ಪಕ ಮಾಹಿತಿ ( ಪೋಟೋ ಮತ್ತು ವಿವರಣೆ )

ಶಾಲಾ ಮೈದಾನ




ಶುದ್ಧ ಕುಡಿಯುವ ನೀರಿನ ಸೌಲಭ್ಯ :



**ಹೈಟೆಕ್ ಶೌಚಾಲಯ :**


ಸ್ವಚ್ಛ ಅಭಿಯಾನ ಭಾರತ್
ಶೌಚಾಲಯ
ಸಾಲು:2023-24.
ಕಾ.ಅರಸೀಕೆರೆ.ಸರ್ಕಾರಿ ಪ್ರೌಢಶಾಲೆಯ ಶೌಚಾಲಯ.
ನಿರ್ಮಾಣ.


ಬಾಲಕರು
ಸ್ವಚ್ಛ ಅಭಿಯಾನ ಭಾರತ್
ಸಾಲು:2023-24.

7. ನಾವಿನ್ಯಯುತವಾಗಿ ತರಗತಿ ಪ್ರಕ್ರೀಯೆಯಲ್ಲಿ ಅಳವಡಿಸಿಕೊಂಡಿರುವ  ಉಪಕ್ರಮಗಳು



ವಿದ್ಯಾರ್ಥಿಗಳಿಂದ ನಿಡಗಲ್ ಬೆಟ್ಟದ ತಪ್ಪಲಿನಲ್ಲಿ ಬೀಜದುಂಡೆ ಪ್ರಸರಣ ಕಾರ್ಯಕ್ರಮ



ಸ್ವಾತಂತ್ರೋತ್ಸವದ ಅಮೃತ ಮಹೋತ್ಸವದ ಭಾಗವಾಗಿ ಮಾನವ ಸರಪಳಿ ರಚನೆ




ತರಭೇತಿ ನಂತರ ಗುಂಪು ಛಾಯಾಚಿತ್ರದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರು



ವಿದ್ಯಾರ್ಥಿಗಳು ಸೂರ್ಯಗ್ರಹಣವನ್ನು ವೀಕ್ಷಿಸುತ್ತಿರುವುದು.



ವಿದ್ಯಾರ್ಥಿಗಳಿಗೆ ಕಪ್ಪೆಯ ಅಂಗಛೇದ ಮಾಡಿ ತೋರಿಸುತ್ತಿರುವುದು.



ಹಸಿ ಕಸ ಮತ್ತು ಒಣ ಕಸ ವಿಂಗಡಣೆ ಮಾಡುತ್ತಿರುವುದು.

**8.ವಿಶೇಷ ಚಟುವಟಿಕೆಗಳು / ಕಾರ್ಯಕ್ರಮಗಳು / ಸಾಧನೆಗಳ ವಿವರ ಸಿ.ಎಸ್.ಆರ್ ಫಂಡ್, ಎಸ್. ಡಿ. ಎಂ.ಸಿ ಇತರೆ ಅನುದಾನದಿಂದಾದ ಪ್ರಗತಿ ವರದಿ.**

**1. 2020-21 ನೇ ಸಾಲಿನಲ್ಲಿ ಊರಿನ ಶಿಕ್ಷಣ ಪ್ರೇಮಿಗಳು ಮತ್ತು ಹಿರಿಯ ವಿಧ್ಯಾರ್ಥಿಗಳ ಸಹಕಾರದಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಸುಮಾರು 19 ಟ್ಯಾಬ್ ಗಳು ಮತ್ತು 4 ಗ್ರೀನ್ ಬೋರ್ಡ್ ಗಳನ್ನು ದಾನವಾಗಿ ಪಡೆದು ವಿತರಿಸಲಾಯಿತು.**



**2. 2021-22 ನೇ ಸಾಲಿನಲ್ಲಿ ಹಳೆಯ ವಿದ್ಯಾರ್ಥಿಗಳಿಂದ ನೋಟ್ ಬುಕ್ ಮತ್ತು ಬ್ಯಾಟರಿ ಮತ್ತು ಯು.ಪಿ.ಎಸ್ ಗಳನ್ನು ಕೊಡುಗೆಯಾಗಿ ಪಡೆಯಲಾಯಿತು.**

3. 2022-23 ನೇ ಸಾಲಿನಲ್ಲಿ ಎಲ್ಲಾ 132 ವಿದ್ಯಾರ್ಥಿಗಳಿಗೆ ಟ್ರ್ಯಾಕ್ ಶೂಟ್ ಗಳನ್ನು ಶಿಕ್ಷಣ ಪ್ರೇಮಿಗಳಾದ ಶ್ರೀಯುತ ರಂಗಸ್ವಾಮಿ.ಎಂ ರವರು ಕೊಡುಗೆಯಾಗಿ ನೀಡಿದರು.



4. 2023-24 ನೇ ಸಾಲಿನಲ್ಲಿ ಹಿರಿಯ ವಿದ್ಯಾರ್ಥಿಗಳಿಂದ ಕ್ರೀಡಾ ಸಮವಸ್ತ್ರಗಳನ್ನು ಕೊಡುಗೆಯಾಗಿ ವಿತರಿಸಲಾಯಿತು



5. 2023-24 ನೇ ಸಾಲಿನಲ್ಲಿ ವಿರ್ಬಾಕ್ ಸಂಸ್ಥೆಯಿಂದ ಶುದ್ದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು.




6. ನಮ್ಮ ಶಾಲೆಯ ಹಿರಿಯ ವಿದ್ಯಾರ್ಥಿಯಾದ ಗೋಪಿನಾಥ್ ರವರಿಂದ ಚಿತ್ರಕಲೆಯ ಪರಿಕರಗಳ ಕೊಡುಗೆ.



**7. ಗೋಪಿನಾಥ್ ವಿದ್ಯಾರ್ಥಿಯಿಂದ ಟೆಲಿಸ್ಕೋಪ್ ಕೊಡುಗೆ**








# ಧನ್ಯವಾದಗಳು